KACM510002452025

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ನ.ರಾ.ಪುರ</u>

<u>ಸಿ ಸಿ ನಂ.**33/2025**</u>

ಫಿರ್ಯಾದಿ ಃ ಸರ್ಕಾರ (ಎನ್ ಆರ್ ಪುರ ಪೊಲೀಸರಿಂದ)

ವಿರುದ್ಧ

ಆರೋಪಿ ಃ 2. ಸಿರಾಜುದ್ದೀನ್ ಯಾನೆ ಜಾಫರ್,
ಬಿನ್ ಜಬಿ, 23 ವರ್ಷ,
ಚೀಲದ ವ್ಯಾಪಾರ ವೃತ್ತಿ,
ವಾಸ ಃ ಟ್ಯಾಂಕ್ ಮೊಹಲ್ಲಾ,
6 ನೇ ಕ್ರಾಸ್, ಬಾಪೂಜಿನಗರ,
ಶಿವಮೊಗ್ಗ ನಗರ ಮತ್ತು ಜಿಲ್ಲೆ.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಪ್ರಕಾರ ಆರೋಪಿತರ ಹೇಳಿಕೆ</u>

ಪ್ರಶ್ನೆ : 1 ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ : 2 ಪ್ರಾಸಾ 1 ಭಾರತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 24.06.2022 ರಂದು ಬೆಳಿಗ್ಗೆ 8.00 ಗಂಟೆಗೆ ತನ್ನ ಯಜಮಾನರಾದ ಉಮೇಶ್ ರವರು ಹಾಲು ತೆಗೆದುಕೊಂಡು ವಾಪಾಸು ತಮ್ಮ ಮನೆಗೆ ಹಿಂತಿರುಗುತ್ತಿರುವಾಗ ಕೃಷ್ಣಹಾರ್ಡ್ ವೇರ್ ಅಂಗಡಿಯ ಹತ್ತಿರ ಬರುತ್ತಿರುವಾಗ ಎನ್.ಆರ್.ಪುರ ಕಡೆಯಿಂದ ಕೊಪ್ಪ ಕಡೆಗೆ ಕೆಎ.14 – ಇಎನ್.1422 ಬೈಕನ್ನು ಅತಿವೇಗವಾಗಿ ಚಲಾಯಿಸಿಕೊಂಡು ಬಂದು ತನ್ನ ಗಂಡನಿಗೆ ಡಿಕ್ಕಿಪಡಿಸಿದ ಪರಿಣಾಮ ತನ್ನ ಗಂಡ ಕಲ್ಲಿನ ಮೇಲೆ ಬಿದ್ದು ಹೊಟ್ಟೆ, ತಲೆ, ಕೈ ಭಾಗ, ಬೆನ್ನಿಗೆ ಪೆಟ್ಟಾಗಿದ್ದು, ನಂತರ ಬೈಕನ್ನು ನಿಲ್ಲಿಸದೆ ಹೋಗಿದ್ದು, ಸದರಿ ವಿಚಾರವನ್ನು ಚಾಸಾ-12 ಗುರುಮೂರ್ತಿಯವರು

KACM510002452025



ತನಗೆ ತಿಳಿಸಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ : 3 ಪ್ರಾಸಾ 1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನ್ನ ಗಂಡನನ್ನು ನ.ರಾ.ಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ದಾಖಲಿಸಿದ್ದು, ಅಲ್ಲಿ ಶಸ್ತ್ರಚಿಕಿತ್ಸೆ ನಡೆಯಿಸಿ, ತನ್ನ ಯಜಮಾನರು ಬದುಕುವುದಿಲ್ಲವೆಂದು ತಿಳಿಸಿದ ಮೇರೆಗೆ ಪುನಃ ನ.ರಾ.ಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು, ದಿನಾಂಕಃ 26.06.2022 ರಂದು ಬೆಳಗಿನ ಜಾವ 12-30 ಕ್ಕೆ ತೀರಿಕೊಂಡಿರುತ್ತಾರೆ ಎಂದು ಆ ಬಗ್ಗೆ ತಾವು ನಿಪಿ-1 ಮತ್ತು 2 ರಂತೆ ದೂರನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :4 ಪ್ರಾಸಾ 2 ಪ್ರಶಾಂತ್, ಇವರು ತಮ್ಮ ನಂತರ ಸಾಕ್ಷ್ಯದಲ್ಲಿ ದಿನಾಂಕ ಃ 26.06.2022 ರಂದು ಮದ್ಯಾಹ್ನ 12-30 ರಿಂದ 1-30 ರ ಅವಧಿಯಲ್ಲಿ ನ.ರಾ.ಪುರ ಅಗ್ರಹಾರದ ಶಂಕರಯ್ಯನವರ ಮನೆ ಎದುರಿನ ರಸ್ತೆಯಲ್ಲಿ ಅಪಘಾತದ ಹಿನ್ನೆಲೆಯಲ್ಲಿ ಪೋಲಿಸರು ಕೃತ್ಯ ಸ್ಥಳದ ಮಹಜರಿಗೆ ಬಂದಿದ್ದು, ಆ ಕಾಲಕ್ಕೆ ಸದರಿ ಸ್ಥಳವನ್ನು ಚಾಸಾ-12 ಗುರುಮೂರ್ತಿಯವರು ತೋರಿಸಿದ್ದು, ಸದರಿ ಸ್ಥಳದಲ್ಲಿ ತನ್ನ ಮತ್ತು ಚಾಸಾ-2 ರವರ ಸಮಕ್ಷಮ ಪೊಲೀಸರು ನಿಪಿ-3 ರಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿ, ನಿಪಿ-4 ರಿಂದ 6 ರಂತೆ ಕೃತ್ಯ ಸ್ಥಳದ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :5 ಪ್ರಾಸಾ-3 ಹರೀಶ, ಇವರು ತಮ್ಮ ಸಾಕ್ಷ್ಯದಲ್ಲಿ 2022 ರಲ್ಲಿ

ನ.ರಾ.ಪುರ ಪೊಲೀಸ್ ಠಾಣಾ ಆವರಣದಲ್ಲಿ ಅಪಾಚಿ ಬೈಕನ್ನು ಅಪಘಾತದ ಹಿನ್ನೆಲೆಯಲ್ಲಿ ಹಾಜರುಪಡಿಸಿದ್ದು, ಅದನ್ನು ತನ್ನ ಮತ್ತು ಚಾಸಾ-9 ರವರ ಸಮಕ್ಷಮ 5-30 ಗಂಟೆಗೆ ನಿಪಿ-8 ಮಹಜರಿನಡಿ ಅಮಾನತುಪಡಿಸಿಕೊಂಡು, ಆ ಕಾಲಕ್ಕೆ ನಿಪಿ-9 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :6 ಪ್ರಾಸಾ-4 ಸುರೇಶ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 30.11.2022 ರಂದು ನ.ರಾ.ಪುರ ಪೊಲೀಸ್ ಠಾಣಾ ಆವರಣದಲ್ಲಿ ಅಪಾಚಿ ಬೈಕನ್ನು ಅಪಘಾತದ ಹಿನ್ನೆಲೆಯಲ್ಲಿ ಹಾಜರುಪಡಿಸಿದ್ದು, ಅದನ್ನು ತನ್ನ ಮತ್ತು ಚಾಸಾ-9 ರವರ ಸಮಕ್ಷಮ 5-15 ರಿಂದ 5-45 ಗಂಟೆಗೆ ನಿಪಿ-8 ಮಹಜರಿನಡಿ ಅಮಾನತುಪಡಿಸಿಕೊಂಡು, ಆ ಕಾಲಕ್ಕೆ ನಿಪಿ-9 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 7 ಪ್ರಾಸಾ-5 ಶ್ರೀನಾಥ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 26.06.2022 ರಂದು ಶಂಕರಯ್ಯನವರ ಮನೆ ಎದುರಿನ ರಸ್ತೆಯಲ್ಲಿ ಉಮೇಶ್ ರವರಿಗೆ ಅಪಘಾತವಾಗಿದ್ದು, ಆ ಕಾಲಕ್ಕೆ ಪೊಲೀಸರು ಚಾಸಾ-12 ರವರು ತೋರಿಸಿದ ಸ್ಥಳದಲ್ಲಿ ತನ್ನ ಮತ್ತು ಚಾಸಾ-7 ರವರ ಸಮಕ್ಷಮ ನಿಪಿ-3 ರಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 11-30 ರಿಂದ 12-30 ಗಂಟೆಗೆ ಮಾಡಿದ್ದು, ಆ ಕಾಲಕ್ಕೆ ನಿಪಿ-4 ರಿಂದ 6 ರಂತೆ ಭಾವಚಿತ್ರವನ್ನು ತೆಗೆದು, ನಂತರ ತನ್ನ ಮತ್ತು ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ 10-00 ರಿಂದ 12-00 ಗಂಟೆಗೆ ನ.ರಾ.ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಉಮೇಶ ಇವರ ಶವಪಂಚನಾಮೆಯನ್ನು ಮಾಡಿ,

ನಿಪಿ-10 ರಂತೆ ಶವ ತನಿಖಾ ವರದಿಯನ್ನು ನೀಡಿದ್ದು, ನಿಪಿ-10 ನ್ನು ಮಾಡುವ ಕಾಲಕ್ಕೆ ನಿಪಿ-11 ರಂತೆ ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾಸಾ-6 ಗುರುಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಉಮಾಮಹೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ವಾಕಿಂಗ್ ಮುಗಿಸಿಕೊಂಡು ವಾಪಾಸು ಬರುತ್ತಿರುವಾಗ ಈಗೆ 2022 ನೇ ಇಸವಿಯಲ್ಲಿ ತನ್ನ ಅಣ್ಣ ಕೈಯಲ್ಲಿ ಹಾಲು ಪ್ಯಾಕೇಟ್ ಹಿಡಿದುಕೊಂಡು ಹೋಗುತ್ತಿದ್ದಾಗ ಮೋಟಾರ್ ಸೈಕಲ್ ಸಂಖ್ಯೆ ಕೆಎ.14 – ಇಎನ್.1422 ಅಪಾಚಿ ಬೈಕನ್ನು ಅಬ್ದುಲ್ ನಾಸೀರ್ ಜೋರಾಗಿ ಚಲಾಯಿಸಿಕೊಂಡು ಬಂದು ತನ್ನ ಅಣ್ಣನಿಗೆ ಡಿಕ್ಕಿಪಡಿಸಿದ ಪರಿಣಾಮ ಆತನು ರಸ್ತೆಯಲ್ಲಿ ಬಿದ್ದಿದ್ದು ತಾನು ಹೋಗಿ ನೋಡಿದಾಗ ಮುಖ ಮತ್ತು ಮೈಕೈಗೆ ತರಚಿದ ಗಾಯಗಳಾಗಿದ್ದು, ತಾನು ಮತ್ತು ಅಬ್ದುಲ್ ನಾಸೀರ್ ರವರು ತನ್ನ ಅಣ್ಣನನ್ನು ನ.ರಾ.ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಅಲ್ಲಿಂದ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಪುನಃ ನ.ರಾ.ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅಲ್ಲಿ ಚಿಕಿತ್ಸೆ ಕೊಡುವ ಕಾಲಕ್ಕೆ ತನ್ನ ಅಣ್ಣ ತೀರಿಕೊಂಡಿರುತ್ತಾರೆ. ಈ ಸಂಬಂಧ ತನ್ನ ಸಮಕ್ಷಮ ಪೊಲೀಸರು ಮಹಜರು ಮಾಡಿ, ಈ ಬಗ್ಗೆ ತಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :9 ಪ್ರಾಸಾ-7 ಬಿ.ಬಿ. ಖತೇಜಾ, ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ಮಗ ಅಯೂಬ್ ಖಾನ್ 2019 ರಲ್ಲಿ ಅಪಾಚಿ ಬೈಕನ್ನು

ಕೊಂಡುಕೊಂಡಿದ್ದು, ಸದರಿ ಬೈಕನ್ನು ತನ್ನ ಮಗ ತೆಗೆದುಕೊಂಡು ಹೋಗುವಾಗ ಗಾಜನೂರು ರಸ್ತೆಯಲ್ಲಿ ಒಂದು ಕಾರಿಗೆ ಅಪಘಾತ ಮಾಡಿದ್ದು, ಆ ಸಂಬಂಧ ತುಂಗಾ ನಗರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದ್ದು, ಆ ಸಮಯದಲ್ಲಿ ಸದರಿ ಬೈಕನ್ನು ಶೋರೂಮಿಗೆ ಬಿಟ್ಟು ರಿಪೇರಿ ಬಗ್ಗೆ ಇನ್ಸೂರೆನ್ಸ್ ಕ್ಲೇಮು ಮಾಡಿಕೊಂಡು, ನಂತರ ಸದರಿ ಬೈಕನ್ನು ಗುಡದಯ್ಯರವರಿಗೆ ಮಾರಾಟ ಮಾಡಿದ್ದು, ಸದರಿಯವರಿಗೆ ಬೈಕಿನ ದಾಖಲಾತಿಗಳನ್ನು ನೀಡಿದ್ದು, ಸದರಿಯವರು ಅವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುವುದಿಲ್ಲ, ನಂತರ ನ.ರಾ.ಪುರ ಪೊಲೀಸರು ತಮಗೆ ಫೋನ್ ಮಾಡಿ ತಮ್ಮ ಬೈಕಿನಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಯ ನುಡಿದಿರುತ್ತಾರೆ . ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :10 ಪ್ರಾಸಾ-8 ಜೆ.ಎಂ. ಚಂದ್ರಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.06.2022 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಅದನ್ನು ನಮ್ಮ ಠಾಣೆ ಗುನ್ನಾ ಸಂಖ್ಯೆ.74/2022 ರಂತೆ ದಾಖಲಿಸಿಕೊಂಡು ನಿಪಿ-12 ರಂತೆ ಪ್ರಥಮ ವರ್ತಮಾನ ವರದಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದು, ನಂತರ ದಿನಾಂಕಃ 26.06.2022 ರಂದು ಬೆಳಗ್ಗೆ 9-30 ಕ್ಕೆ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ಗಾಯಾಳು ಉಮೇಶ್ ಇವರು ಮೃತ ಪಟ್ಟಿರುತ್ತಾರೆ ಎಂದು ತಿಳಿಸಿದ ಮೇರೆಗೆ ತಾನು ಕಲಂ.304(ಎ) ಐ.ಪಿ.ಸಿ.ಯನ್ನು ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ನಿಪಿ-13 ರಂತೆ ಮನವಿಯನ್ನು ಮಾಡಿ ಕೊಂಡಿದ್ದು, ನಂತರ ಪ್ರಕರಣದ ತನಿಖೆಯನ್ನು ಚಾಸಾ-19 ರವರಿಗೆ ವಹಿಸಿಕೊಟ್ಟಿರು ತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :11 ಪ್ರಾಸಾ-9 ಶಶಿಧರ, ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಟಿ.ವಿ.ಎಸ್. ಅಪಾಚಿ ಬೈಕನ್ನು ಖರೀದಿಸಿದ್ದು, ಅದರ ನೋಂದಣಿ ಸಂಖ್ಯೆ. ಕೆಎ.17 – ಇವಿ.7043 ಆಗಿದ್ದು, ದಿನಾಂಕ 15.01.2021 ರಂದು ತಾನು ಅಂಗಡಿಯಿಂದ ಮನೆಗೆ ಊಟಕ್ಕೆ ಬಂದು ನಮ್ಮ ಮನೆಯ ಮುಂದೆ ಬೈಕ್ ನಿಲ್ಲಿಸಿ ಊಟ ಮಾಡಿ ಪುನಃ 2-30 ರಿಂದ 3-00 ಗಂಟೆಗೆ ಬಂದು ನೋಡಿದಾಗ ಬೈಕ್ ಇರಲಿಲ್ಲ, ಈ ಬಗ್ಗೆ ತಾನು ದಿನಾಂಕಃ 27.11.2021 ರಂದು ಹೊನ್ನಳ್ಳಿ ಪೊಲೀಸ್ ಠಾಣೆಗೆ ತನ್ನ ಬೈಕು ಕಳ್ಳತನವಾದ ಬಗ್ಗೆ ದೂರನ್ನು ನೀಡಿದ್ದು, ನಂತರ ದಿನಾಂಕಃ 02.01.2023 ರಂದು ಹೊನ್ನಳ್ಳಿ ಪೊಲೀಸರು ಬೈಕು ಸಿಕ್ಕಿರುವ ಬಗ್ಗೆ ಮಾಹಿತಿ ನೀಡಿದ್ದು, ನ.ರಾ.ಪುರ ಪೊಲೀಸ್ ಠಾಣೆಯಲ್ಲಿ ತನ್ನ ಬೈಕನ್ನು ಪರಿಶೀಲಿಸಿದಾಗ ನಂಬರ್ ಪ್ಲೇಟನ್ನು ಬದಲಾವಣೆ ಮಾಡಿದ್ದು, ತನ್ನ ಬಳಿ ಇದ್ದ ಆರ್.ಸಿ. ಕಾರ್ಡ್ ನಿಂದ ಇಂಜಿನ್ ನಂಬರ್ ಮತ್ತು ಚಾಸಿ ನಂಬರ್ ಅನ್ನು ಪರೀಕ್ಷಿಸಿದಾಗ ಸದರಿ ಬೈಕ್ ನನ್ನದಾಗಿದ್ದು, ಸದರಿ ಬೈಕಿಗೆ ಕೆಎ.14 ಎಂದು ನಮೂದಾಗಿದ್ದು, ಸದರಿ ಬೈಕನ್ನು ಅಪಘಾತಪಡಿಸಿ ಬಿಟ್ಟು ಹೋಗಿದ್ದು, ನಂತರ ತಾನು ನ.ರಾ.ಪುರ ಪೊಲೀಸರಿಗೆ ಹೊನ್ನಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರುಪಡಿಸಿ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :12 ಪ್ರಾಸಾ-10 ವಸಂತ್ ಶಂಕರ್ ಭಾಗವತ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 26.06.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಕಡತವನ್ನು ಸ್ವೀಕರಿಸಿ ಅದೇ ದಿನ ಚಾಸಾ-2 ಮತ್ತು 3 ರವರ ಸಮಕ್ಷಮ ಮೃತ ಉಮೇಶ್ ಇವರ ಶವ ತನಿಖಾ ವರದಿಯನ್ನು

ಅವಧಿಯಲ್ಲಿ ಕೈಗೊಂಡು ಆ ಕಾಲಕ್ಕೆ ಮೃತನ ಭಾವಚಿತ್ರವನ್ನು ತೆಗೆದು, ನಂತರ ಚಾಸಾ-16 ರವರನ್ನು ಶವ ಬೆಂಗಾವಲು ಕರ್ತವ್ಯಕ್ಕೆ ನೇಮಿಸಿ ಶವ ತನಿಖಾ ವರದಿ ಮುಗಿದ ನಂತರ ಮೃತನ ದೇಹವನ್ನು ಅವನ ಸಂಬಂಧಿಕನಿಗೆ ಹಸ್ತಾಂತರಿಸಿ ಸ್ವೀಕೃತಿ ಪಡೆದುಕೊಂಡು, ಅದೇ ದಿನ ಕೃತ್ಯ ಸ್ಥಳದ ಪಂಚನಾಮೆಯ ಸಲುವಾಗಿ ಚಾಸಾ-2 ಮತ್ತು 7 ರವರಿಗೆ ನೋಟೀಸ್ ನೀಡಿ, ಸದರಿ ಸ್ಥಳವನ್ನುಚಾಸಾ-12 ರವರು ತೋರಿಸಿದ್ದು, ಅವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಮದ್ಯಾಹ್ನ 12-30 ರಿಂದ 1-30 ರವರೆಗೆ ಕ್ಷಎಗೊಂಡು ಆ ಕಾಲಕ್ಕೆ ಸದರಿ ಕೃತ್ಯ ಸ್ಥಳದ ಭಾವಚಿತ್ರಗಳನ್ನು ತೆಗೆಯಿಸಿ, ಅದೇ ದಿನ ಚಾಸಾ-4 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :13 ಪ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 26.06.2022 ರಂದು ಘಟನೆಗೆ ಸಂಬಂಧಪಟ್ಟಂತೆ ಸಿ.ಸಿ.ಟಿ.ವಿ.ಯ ಬಗ್ಗೆ ಸುರೇಶ್ ಮತ್ತು ವಿಷ್ಣು ಹಾರ್ಡ್ ವೇರ್ ಮಾಲೀಕರಿಗೆ ಫೂಟೇಜ್ ನೀಡುವಂತೆ ಮನವಿಯನ್ನು ಸಲ್ಲಿಸಿ, ದಿನಾಂಕಃ 12.07.2022 ರಂದು ಸಂಘರ್ಷಕೊಳಕಾದ ಬಾಲಕನ ತಂದೆಯಾದ ಮುನಫ್ ಇವರಿಗೆ 41(ಎ) ಸಿ.ಆರ್.ಪಿ.ಸಿ. ಅಡಿ ನೋಟೀಸ್ ನೀಡಿ, ದಿನಾಂಕಃ 14.07.2022 ರಂದು ನ.ರಾ.ಪುರ ಸರ್ಕಾರಿ ಆಸ್ಪತ್ರೆಯಿಂದ ಮೃತನ ಶವ ಪರೀಕ್ಷಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡು, ದಿನಾಂಕಃ 25.07.2022 ರಂದು ಸಿ.ಡಿ.ಆರ್.ನಂ ವರದಿಯನ್ನು ನೀಡುವಂತೆ ಕೋರಿ ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಮನವಿ ಮಾಡಿಕೊಂಡಿದ್ದು, ದಿನಾಂಕಃ 27.07.2022 ರಂದು ಆರ್.ಟಿ.ಓ., ಚಿಕ್ಕಮಗಳೂರು ಇವರಿಗೆ ಮೋಟಾರ್ ಸೈಕಲ್ ಸಂಖ್ಯೆ.ಕೆಎ.14 – ಇಎನ್.1422 ಬೈಕಿಗೆ ಸಂಬಂಧಪಟ್ಟಂತೆ ಪತ್ರ ವ್ಯವಹಾರ ಹಾಗೂ ಬಿ.

ಎಕ್ಸ್‌ಟ್ರಾಕ್ಟ್ ಅನ್ನು ಕೋರಿ ಮನವಿ ಸಲ್ಲಿಸಿದ್ದು, ಅವರಿಂದ ದಿನಾಂಕಃ 14.09.2022 ರಂದು ಸದರಿ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :14 ಪ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 10.09.2022 ರಂದು ವಾಹನ ಮಾಲೀಕರಿಗೆ ಕಲಂ.133 ಮೋಟಾರು ವಾಹನ ಕಾಯ್ದೆಯಡಿ ಪಿ.ಎಸ್.ಐ. ನ.ರಾ.ಪುರ ಇವರ ಮುಖಾಂತರ ನೋಟೀಸ್ ಜಾರಿಗೊಳಿಸುವಂತೆ ಚಾಸಾ-13 ರವರಿಗೆ ನೋಟೀಸ್ ನೀಡಿದ್ದು, ದಿನಾಂಕಃ19.09.2022 ರಂದು ಚಾಸಾ-13 ರವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಅದೇ ದಿನ ಟಿ.ವಿ.ಎಸ್. ಶೋ ರೂಂ ಬೈಪಾಸ್ ರೋಡ್ ಶಿವಮೊಗ್ಗ ಇವರಿಗೆ ಕಲಂ.91 ಸಿ.ಆರ್.ಪಿ.ಸಿ. ರಡಿ ನೋಟೀಸ್ ಜಾರಿ ಮಾಡಿ ಅಪಘಾತದಿಂದ ಪರಿಹಾರ ಪಡೆದ ಬಗ್ಗೆ ಮತ್ತು ಬೈಕನ್ನು ಯಾವ ವ್ಯಕ್ತಿಗೆ ಡೆಲಿವರಿ ಮಾಡಿರುತ್ತೀರಿ ಹಾಗೂ ಆ ಬೈಕಿಗೆ ಸಂಬಂಧಿಸಿದ ದಾಖಲಾತಿಗಳನ್ನು ಒದಗಿಸುವಂತೆ ನೋಟೀಸ್ ನೀಡಿದ್ದು, ದಿನಾಂಕಃ 25.09.2022 ರಂದು ಚಾಸಾ-14 ರವರಿಂದ ಮೋಟಾರ್ ಸೈಕಲ್ ಸಂಖ್ಯೆ.ಕೆಎ.14 –ಇ.ಎನ್.1422 ಕ್ಕೆ ಸಂಬಂಧಪಟ್ಟಂತೆ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು, ದಿನಾಂಕಃ 12.10.2022 ರಂದು 1 ನೇ ಆರೋಪಿಯಾದ ನೀಮಗೆ ಕಲಂ.41 ಸಿ.ಆರ್.ಪಿ.ಸಿ. ಅಡಿ ನೋಟೀಸ್ ನೀಡಿ ದಿನಾಂಕಃ 07.11.2022 ರಂದು ಸಂಘರ್ಷಕ್ಕೊಳಗಾದ ಬಾಲಕನನ್ನು ಹಾಜರುಪಡಿಸುವಂತೆ ಅವರ ತಂದೆಗೆ ತಿಳಿಸಿದ್ದು, ಅದೇ ದಿನ ಸಂಘರ್ಷಕೊಳ್ಳಕಾದ ಬಾಲಕನ ಹೇಳಿಕೆಯನ್ನು ಪಡೆದುಕೊಂಡು ಅವರ ತಂದೆಯ ಸುಪರ್ದಿಗೆ ನೀಡಿದ್ದು, ದಿನಾಂಕಃ 08.11.2022 ರಂದು 1 ರಿಂದ 3 ನೇ ಆರೋಪಿತರಾದ ನಿಮಗೆ ನೋಟೀಸ್ ನೀಡಿ ನಂತರ ಅದೇ ದಿನ ಅವರ ಸ್ವ ಇಚ್ಛಾ ಹೇಳಿಕೆಗಳನ್ನು

ಪಡೆದುಕೊಂಡು, ನಂತರ ಪ್ರಕರಣದ ಕಡತವನ್ನು ಚಾಸಾ-20 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :15 ಪ್ರಾಸಾ-11 ಸತ್ಯ ನಾರಾಯಣ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10.11.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಕಡತವನ್ನು ಸ್ವೀಕರಿಸಿ ದಿನಾಂಕಃ 10.11.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದು ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿ ದಿನಾಂಕಃ 30.11.2022 ರಂದು ಈ ಪ್ರಕರಣಕ್ಕೆ ಸಂಬಂಧಿಸಿದ ಮೋಟಾರ್ ಸೈಕಲ್ ಸಂಖ್ಯೆ.ಕೆಎ.14 – ಇಎನ್.1422 ಬೈಕನ್ನು 3 ನೇ ಆರೋಪಿಯಾದ ನೀವು ಠಾಣೆಗೆ ತಂದು ಹಾಜರುಪಡಿಸಿದ್ದು, ಅದನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ನಮ್ಮ ಠಾಣಾ ಆವರಣದಲ್ಲಿ ಸದರಿ ಮೋಟಾರ್ ಸೈಕಲ್ ನ ಅಮಾನತು ಪಂಚನಾಮೆಯನ್ನು ಸಂಜೆ 5-15 ರಿಂದ 5-45 ರ ಅವಧಿಯಲ್ಲಿ ಜರುಗಿಸಿ ಆ ಕಾಲಕ್ಕೆ ಸದರಿ ಮೋಟಾರ್ ಸೈಕಲ್ ನ ಭಾವಚಿತ್ರವನ್ನು ತೆಗೆಸಿದ್ದು, ನಂತರ ಅಮಾನತುಪಡಿಸಿಕೊಂಡ ಮೋಟಾರ್ ಸೈಕಲ್ ನ ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದನೆ ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :16 ಪ್ರಾಸಾ-11 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 15.11.2022 ರಂದು ಅಮಾನತುಪಡಿಸಿಕೊಂಡಿರುವ ಮೋಟಾರ್ ಸೈಕಲನ್ನು ಪರೀಕ್ಷಿಸಿ ವರದಿ ನೀಡುವಂತೆ ಚಾಸಾ-11 ರವರಿಗೆ ನಿವೇದನೆ ಮಾಡಿಕೊಂಡಿದ್ದು, ದಿನಾಕ 18.12.2022 ರಂದು ಸದರಿ ವಾಹನದ ಬಿ ಎಕ್ಸ್‌ಟ್ರಾಕ್ಟ್ ಅನ್ನು ಚಾಸಾ-19 ರವರು ಕೋರಿದ್ದು, ಅದನ್ನು

ಪಡೆದುಕೊಂಡು ಕಡತಕ್ಕೆ ಅಳವಡಸಿಕೊಂಡು, ಸದರಿ ಬಿ ಎಕ್ಸಟ್ರಾಕ್ಟ್ ಅನ್ನು ಪರಿಶೀಲಿಸಿದಾಗ ಸದರಿ ಇಂಜಿನ್ ನಂಬರ್ ಕೆಎ.17 - ಇವಿ.7043 ರ ಮೋಟಾರ್ ಸೈಕಲ್ ಗೆ ಸಂಬಂಧಿಸಿದಾಗಿದ್ದು, ಅದರ ಮಾಲೀಕರು ಚಾಸಾ15 ರವರು ಇರುವುದು ಕಂಡು ಬಂದಿದ್ದು, ದಿನಾಂಕಃ 03.01.2023 ರಂದು ಚಾಸಾ-15 ರವರನ್ನು ಬರ ಮಾಡಿಕೊಂಡು ಅವರ ಹೇಳಿಕೆಯನ್ನು ಪಡೆದುಕೊಂಡು, ಸದರಿಯವರ ವಾಹನ ಕಳ್ಳತನವಾದ ಬಗ್ಗೆ ಹೊನ್ನಳ್ಳಿಯ ಪೊಲೀಸ್ ಠಾಣೆಯಲ್ಲಿ, ದೂರು ಕೊಟ್ಟಿರುವುದಾಗಿಕ, ಅದರ ಅಪರಾಧ ಸಂಖ್ಯೆ.255/2021 ಎಂದು ಚಾಸಾ-15 ರವರು ತಿಳಿಸಿದ್ದು, ದಿನಾಂಕಃ 27.01.2023 ರಂದು ತನಿಖಾ ಕಾಲದಲ್ಲಿ ತೆಗೆದ ಭಾವಚಿತ್ರವನ್ನು ಸಿ.ಡಿ.ಆರ್.ಗೆ ಪರಿವರ್ತಿಸಿದ ಬಗ್ಗೆ ನಮ್ಮ ಸಿಬ್ಬಂಧಿಯಾದ ಸಿ.ಪಿ.ಸಿ.340 ಇವರ ಪ್ರಮಾಣ ಪತ್ರ ಪಡೆದುಕೊಂಡು ನಂತರ ಪ್ರಕರಣದ ಕಡತವನ್ನು ಚಾಸಾ-21 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆ :17 ಪ್ರಾಸಾ-12 ಗುರುದತ್ತ ಕಾಮತ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 27.03.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದಿ ಪಡೆದುಕೊಂಡು ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನುಪರಿಶೀಲಿಸಿ ಅದೇ ದಿನ ನಿಪಿ-23 ರಂತೆ ಕೆಎ.17 – ಇವಿ.7043 ಇದರ ಐ.ಎಂ.ವಿ. ವರದಿಯನ್ನು ಚಾಸಾ-11 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು, ಆರೋಪಿತರಾದ ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆ :30 ನೀವು ಏನಾದರು ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ :31 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗು ಸರಿಯಾಗಿದೆ ಎಂದು ದೃಢೀಕರಿಸಲಾಗಿದೆ.

ದಿನಾಂಕ **15** ನೇ ದಿವಸ ಜೂನ್ ಮಾಹೇ **2026** ನೇ ಇಸವಿ

Sirajuddin

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್‌ಸಿ ನ.ರಾ.ಪುರ